2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ,
ನಂಜನಗೂಡು

**ಸಿ. ಸಿ. ನಂ.:313/21**

ಆರೋಪಿಯ ಹೆಸರು ಎನ್ ರವಿಕುಮಾರ್ ಬಿನ್ ನರಸೇಗೌಡ, 41 ವರ್ಷ,

ವಾಸ್ತವ್ಯ ನಂ:33, ಬಿ ಎಂ ಲೇಔಟ್, ದೇವೀರಮ್ಮನಹಳ್ಳಿ, ನಂಜನಗೂಡು .

**ಅ. ಪ್ರ. ಸಂ. ಕಲಂ 313ರನ್ವಯ ಆರೋಪಿಯ ಹೇಳಿಕೆ**

**ಪ್ರಶ್ನೆ 1:** ನೀವು ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ?

**ಉತ್ತರ :**

**ಪ್ರಶ್ನೆ 2:** ಪ್ರಾಸಾ-1 ಡಿ.ಪಿ.ಪ್ರಕಾಶ್, ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ ಆರೋಪಿಯಾದ ನೀವು ಹಾಗೂ ಪ್ರಾಸಾ-1 ರವರು ಪರಿಚಯಸ್ಥರಾಗಿದ್ದು, ಸದರಿ ಪರಿಚಯದ ಆಧಾರದ ಮೇಲೆ ಆರೋಪಿಯಾದ ನೀವು ನಿಮ್ಮ ದರದು ನಿಮಿತ್ತ ಅಂದರೆ ರಿಯಲ್ ಇಸ್ಟೇಟ್ ವ್ಯವಹಾರಕ್ಕಾಗಿ ಹಣದ ಅವಶ್ಯಕತೆಯಿದೆ ಎಂದು ಫಿರ್ಯಾದುದಾರರಿಂದ 2018 ನೇ ಇಸವಿ ನವೆಂಬರ್ ಮಾಹೆ ಮೊದಲ ವಾರದಲ್ಲಿ ಭೇಟಿ ಮಾಡಿ ಫಿರ್ಯಾದಿಯಿಂದ ದಿ:05.11.2018 ರಂದು ರೂ.5,00,000/-ಗಳನ್ನು ಕರ್ನಾಟಕ ಬ್ಯಾಂಕ್ ಲಿ., ನಂಜನಗೂಡು ಶಾಖೆಯ ಚೆಕ್ ನಂ:286018 ರ ಮೂಲಕ, ದಿನಾಂಕ: 13.12.2018 ರಂದು ರೂ.5,00,000/-ಗಳನ್ನು ಕರ್ನಾಟಕ ಬ್ಯಾಂಕ್ ಲಿ., ನಂಜನಗೂಡು ಶಾಖೆಯ ಚೆಕ್ ನಂ:301762 ರ ಮೂಲಕ, ದಿನಾಂಕ:02.02.2019 ರಂದು ರೂ.1,30,000/-ಗಳನ್ನು ಕರ್ನಾಟಕ ಬ್ಯಾಂಕ್ ಲಿ., ನಂಜನಗೂಡು ಶಾಖೆಯ ಚೆಕ್ ನಂ:298460 ರ ಮೂಲಕ, ದಿನಾಂಕ:13.03.2019 ರಂದು ರೂ.95,000/-ಗಳನ್ನು ಕರ್ನಾಟಕ ಬ್ಯಾಂಕ್ ಲಿ., ನಂಜನಗೂಡು ಶಾಖೆಯ ಚೆಕ್ ನಂ:298463 ರ ಮೂಲಕ ಮತ್ತು ದಿನಾಂಕ: 19.03.2019 ರಂದು ರೂ.1,00,000/-ಗಳನ್ನು ಕರ್ನಾಟಕ ಬ್ಯಾಂಕ್ ಲಿ., ನಂಜನಗೂಡು ಶಾಖೆಯ ಚೆಕ್ ನಂ:298466 ರ ಮೂಲಕ ಒಟ್ಟು ರೂ.13,25,000/-ಗಳನ್ನು ಸಾಲವಾಗಿ ಪಡೆದುಕೊಂಡು, ಸದರಿ ಸಾಲವನ್ನು ಮರುಪಾವತಿ ಮಾಡುವುದಾಗಿ ಒಪ್ಪಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

**ಉತ್ತರ:**

ಪ್ರಶ್ನೆ 3 ಪ್ರಾಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಆರೋಪಿಯಾದ ನೀವು ಸದರಿ ಸಾಲದ ಬಾಬ್ತು ನಿಮ್ಮ ಖಾತೆ ಹೊಂದಿರುವ ಹೆಚ್ ಡಿ ಎಫ್ ಸಿ ಬ್ಯಾಂಕ್, ನಂಜನಗೂಡು ಶಾಖೆಯ ಚಕ್ ನಂಃ000043 ಗೆ ರೂ.13,25,000/- ಗಳನ್ನು ದಿನಾಂಕಃ28.12.2020 ಎಂದು ನಮೂದಿಸಿ ಪ್ರಾಸಾ-1 ರವರಿಗೆ ನೀಡಿದ್ದು, ಸದರಿ ಚಕ್ಕನ್ನು ಪ್ರಾಸಾ-1 ರವರು ನಗದೀಕರಣ ಪಡಿಸಲು ತಮ್ಮ ಖಾತೆಯಿರುವ ಬ್ಯಾಂಕಿನ ಮೂಲಕ ಹಾಜರುಪಡಿಸಿದಾಗ ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ಹಿಂಬರಹದೊಂದಿಗೆ ದಿಃ30.12.2020 ರಂದು ವಾಪಸ್ಸು ಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 4 ಪ್ರಾಸಾ-1 ರವರು ಮುಂದುವರೆದು ಅವರ ಪರ ವಕೀಲರ ಮೂಲಕ ದಿಃ16.01.2021 ರಂದು ಕಾನೂನು ರೀತ್ಯಾ ನೋಟಿಸನ್ನು ನೀಡಿದ್ದು, ಸದರಿ ನೋಟೀಸ್ ಜಾರಿಯಾಗಿದ್ದು, ಸದರಿ ನೋಟೀಸಿಗೆ ಅಸಮಂಜಸವಾದ ಪ್ರತ್ಯುತ್ತರವನ್ನು ನೀಡಿದ್ದು, ಹಣವನ್ನು ಮರುಪಾವತಿ ಮಾಡದೆ ಕಲಂ 138 ನೆಗೋಶಿಯಬಲ್ ಇನ್ಸ್ಟ್ರುಮೆಂಟ್ ಆಕ್ಟ್ ಪ್ರಕಾರ ಅಪರಾಧ ಮಾಡಿರುವಿರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ

ಪ್ರಶ್ನೆ 5 ನಿಮಗೆ ಇನ್ನೂ ಏನಾದರೂ ಹೇಳುವುದು ಇದೆಯಾ?

ಉತ್ತರ ಃ

ಪ್ರಶ್ನೆ 6ಃ ನಿಮ್ಮ ಪರ ಸಾಕ್ಷಿ ವಿಚಾರಣೆ ಮಾಡುವಿರಾ ?

ಉತ್ತರ ಃ

**ಫಿರ್ಯಾದುದಾರರ ಪರ ಸಾಕ್ಷಿದಾರರ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕಃ19.04.2023 ರಂದು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.**

**2** ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು
ಜೆ.ಎಮ್.ಎಫ್.ಸಿ.
ನಂಜನಗೂಡು